

ಮುಖವಾಡ ತೊಟ್ಟು ಬದುಕ್ತಾ ಇದ್ದೀವಿ ನಿಜ. ಆದ್ರೆ ಒಮ್ಮೊಮ್ಮೆ ಹೀಗೆ ನಮಗೆ ಅರಿವಿಲ್ಲದೇ ನಾವು ಮೃಗಗಳಾಗಿ ಬಿಡ್ತೀವಿ ನೋಡಿ'.

'ಅದೆಲ್ಲ ಸರಿ ಸಾರ್, ಆದ್ರೆ ತಾವು?'

'ನಾನು ಮನುಷ್ಯನೇ ಕಣ್ರಿ, ಯಾಕ್ಹಿಂಗೆ ಕೇಳ್ತಿರಾ? ಪೋಸ್ಟ್ ಗ್ರಾಜುಯೇಟ್ ಓದಿ ಪ್ರೊಫೆಸರ್ ಆಗಿದ್ದೇನೆ ಖರೆ, ಆದ್ರೂ ನಾನು ಮನುಷ್ಯನೇ. ಹಂಗ ನೋಡಿದ್ರೆ ಹಳ್ಳಿಯಲ್ಲಿ ನಮ್ಮದು ಗೌಡ್ಕಿ ಮನೆತನ. ಅಜ್ಜ ಮುತ್ತಜ್ಜರ ಕಾಲದಿಂದಲೂ ಊರಲ್ಲಿನ ಎಲ್ಲ ನ್ಯಾಯ ಪಂಚಾಯ್ತಿಕೆ ನಮ್ಮ ಮನೆ ಅಂಗಳದಲ್ಲೇ ನಡೀತಿದ್ವು. ವಾರದಲ್ಲೇ ಒಬ್ಬಿಬ್ಬರನ್ನು ಊರ ಮಂದಿನ ಕಂಬಕ್ಕೆ ಕಟ್ಟಿ ಹೊಡಿತಿರೋದನ್ನ ನಾನು ಕಣ್ಣಾರೆ ಕಂಡಿದ್ದೇನೆ. ಆಗ, ನೀವು ಹೊಡೀರಿ ಸಣ್ಣ ಧಣ್ಯಾರ ಅಂತ ನಂಗೂ ಚರ್ಮದ ಚಾಟಿ ಕೊಡ್ತಿದ್ರು. ನಾನು ಚಾಟಿಯನ್ನು ಜೋರಾಗಿ ಬೀಸಿದಂತೆಲ್ಲ ಹೊಡಿಸಿಕೊಳ್ತಿದ್ದ ಕಮ್ಮಿ ಜಾತಿ ಜನ ಓ ಓ ಅಂತ ಚೀರೋರು. ಅವರು ಚೀರಿದಂತೆಲ್ಲ ನನಗೆ ಒಂಥರಾ ಹುಮ್ಮಸ್ಸು ಬರ್ತಿತ್ತು. ನಾನು ಮತ್ತಷ್ಟು ಜೋರಾಗಿ ಹೊಡೀತಿದ್ದೆ. ಹೀಗೆ ಹೊಡೆದು ಬಡಿದು ಮಾಡಿಯೇ ನಾವು ಎಷ್ಟು ಜನರನ್ನ ರಿಪೇರಿ ಮಾಡಿಲ್ಲ ಹೇಳಿ. ಇದೆಲ್ಲ ರೂಢಿಯಾಗಿದ್ದ ನನಗೆ ಒಂದೆರಡು ವಾರ ಯಾವ ನ್ಯಾಯ ಪಂಚಾಯ್ತಿಕೆ ಬರದೇ ಇದ್ದಾಗ ಕೈ ಕಟ್ಟಿ ಬಿಟ್ಟಂತಾಗೋದು. ಬಹುಶಃ ಅದೆಲ್ಲ ಆ ಗೌಡ್ಕಿ ಗತ್ತು ನನ್ನೊಳಗೆ ಕೆಲಸ ಮಾಡ್ತಿದೆ ಅನ್ಸುತ್ತೆ ಕಣ್ರಿ. ಹಂಗಂತ ಇದು ಅದು ಸರಿ ಅಂತ ನಾನೇನು ಹೇಳಲ್ಲ' ಎಂದವರು ಜೋರಾಗಿ ನಗಾಡಿದ್ರು.

ಸ್ವಲ್ಪ ಹೊತ್ತು ಸುಮ್ಮನಿದ್ದು, 'ನೋಡಿ ಮಿಸ್ಟರ್ ನಡಕಟ್ಟಿ, ಈ ಬೆಂಗಳೂರು ಎಲ್ಲರಿಗೂ ಅನ್ನ ಕೊಡುತ್ತೆ. ತಮ್ಮೂರುಗಳಲ್ಲಿ ದುಡಿಮೆ ಸಿಗದೇ ಇದ್ದವರಲ್ಲ ಇಲ್ಲಿಗೆ ಬಂದು ಬದುಕು ಕಟ್ಕೋತಿದ್ದಾರೆ. ಆದ್ರೆ, ಕೆಲವರಿಗೆ ಎಂಥ ಚಾನ್ಸು ಕೊಟ್ರೂ ತಮ್ಮ ತಿರಬೋಕಿ ಬುದ್ಧಿ ಬಿಡಲ್ಲ. ಈಗ ಆ ಕಳ್ಳನನ್ನೇ ತಗೊಳ್ಳಿ. ಆತನಿಗೆ ಇಲ್ಲಿ ದುಡಿದುಣ್ಣಲು ಎಷ್ಟೊಂದು ಅವಕಾಶಗಳಿವೆ. ಆದ್ರೂ ಅವನು ಕಳ್ಳತನ ಮಾಡಿಯೇ ಹೊಟ್ಟೆ ತುಂಬಿಸಿಕೋಬೇಕು ಅಂತಾನೆ ಅಂದ್ರೆ ಅವನಿಗೆ ಹಾಗೆ ಹೊಡೆದಿದ್ದು ಸರಿ ಅನಿಸ್ತದೆ ನನಗೆ. ಇಸ್ ಇಟ್?' ಎಂದು ಜೇಬಿನಿಂದ ಸಿಗರೇಟು ಹೊರತೆಗೆದರು.

'ಸಾರ್, ಇಲ್ಲಿ ಬಸ್‌ನಲ್ಲಿ ಸಿಗರೇಟ್ ಸೇದೋದು ಬೇಡ ಅನ್ಸುತ್ತೆ'.

'ಹೌದಾ. ನೀವೇಳೋದು ಸರಿ ಕಣ್ರಿ. ಹೇಳಿದ್ನಲ್ಲ, ಊರಲ್ಲಿ ನಮ್ಮದು ಗೌಡ್ಕಿ ಮನೆತನ. ಅಲ್ಲೆಲ್ಲ ಯಾವ ರೂಲ್ಸುಗಳು ನಮಗೆ ಅಪ್ಲೈ ಆಗಲ್ಲ. ಆದ್ರೆ ಈ ಬಡ್ಡಿಮಗಂದು ಬೆಂಗಳೂರು ಎಲ್ಲರನ್ನೂ ಒಂದೇ ತಟ್ಟೇಲಿ ತೂಗುತ್ತೆ ಕಣ್ರಿ. ಬಸ್ ಹೊರಡಕ್ಕೆ ಇನ್ನೂ ಅರ್ಧ ಗಂಟೆ ಆಗುತ್ತೆ. ಬನ್ನಿ, ಟೀ ಕುಡಿದು ಅಲ್ಲೇ ಸ್ಮೋಕಿಂಗ್ ಮುಗಿಸೋಣ' ಅಂತಂದು ರಾಮೇಗೌಡ್ರು ನನ್ನನ್ನ ಎಬ್ಬಿಸ್ಕೊಂಡು ಹೊಂಟ್ರು.

***

ಟೀ ಅಂಗಡಿಯಲ್ಲಿ ಕೂತಿದ್ದ ಒಂದಿಬ್ರು ಗಿರಾಕಿಗಳೂ ಆ ಮೂಕ ಕಳ್ಳನ ಬಗ್ಗೆಯೇ ಚರ್ಚಿಸುತ್ತಿದ್ದರು. ನಾವಿಬ್ಬರು ಹಾಕಿದ್ದ ಬಟ್ಟೆ ಮತ್ತು ಗತ್ತು ನೋಡಿ, ಟೀ ಅಂಗಡಿಯವ ಅಲ್ಲಿರುವ ಒಂದೆರಡು ಸ್ಟೂಲುಗಳನ್ನು ಒರೆಸಿ ಕೂಡಲು ಹೇಳಿ ಟೀ ಬಿಸಿ ಮಾಡತೊಡಗಿದ.

'ಥತ್ತರಿಕೆ, ಏನ್ ಜನಾನಪ್ಪ. ಅವಕಾಶ ಸಿಕ್ಕರೆ ಈ ನಗರಗಳಲ್ಲಿರೋ ನಾಗರಿಕರು ಕೂಡ ಕಾಡುಮೃಗವಾಗಿ ಬಿಡ್ತಾರೆ' ಎಂದು ಕುಳಿತವನಲ್ಲಿ ಒಬ್ಬನೆಂದ.

'ನಮ್ಮೂರಲ್ಲಿ ನಾಯಿಗಳಿಗೆ ಹುಚ್ಚು ಹಿಡಿದಾಗ ಹೀಗೆಯೇ ಹೊಡೆದು ಕೊಲ್ತಿದ್ರು ಮಾರಾಯ' ಎಂದು ಇನ್ನೊಬ್ಬ ತನ್ನ ಮಾತು ಸೇರಿಸಿದ.

'ಹಳ್ಳಕ್ಕೆ ಬಿದ್ದವನಿಗೆ ಆಳಿಗೊಂದು ಕಲ್ಲು. ಪಾಪ, ಮಾತು ಬರದ ಮೂಕ ರಂಗಗ ಹಂಗ ಹೊಡಿಬಾರದಿತ್ತು'. ಟೀ ಅಂಗಡಿಯವ ತನ್ನ ಅಸಹನೆ ಸೇರಿಸಿದ.

'ನಿಮಗೆಲ್ಲ ಗೊತ್ತಾ ಅವನು?' ನಾನು ನಡುವೆ ಬಾಯಿ ಕೇಳಿದೆ.

'ಹುಂ ಸಾರ್, ನಮ್ಮೂರು ಸೀಮೆ ಹುಡುಗನೇ ಅವನು. ನಮ್ಮೂರಿನ ಪಕ್ಕದಲ್ಲೆ ಇರೋ ಬಿಳಿಗಿರಿ ಬೆಟ್ಟದ ಜೇನು ಕುರುಬರ ಹಾಡಿಗೆ ಸೇರಿದವನು. ಒಮ್ಮೊಮ್ಮೆ ಅಂವ ತನ್ನ ಹಾಡಿಯವರೊಂದಿಗೆ ಬೆಟ್ಟದಿಂದಿಳಿದು ನಮ್ಮೂರಿನ ಜಮೀನುಗಳಿಗೆ ದುಡಿಯಲು ಬರ್ತಿದ್ದ. ಗೊತ್ತಲ್ಲ ಸಾಹೇಬ್ರೆ, ಕಾಡಲ್ಲಿರೋರನ್ನ ಒಕ್ಕಲೆಬ್ಬಿಸೋ ಕಾಯ್ದೆ ಬಂತಲ್ಲ, ಆಗ ಇಂಥವರಿಗೆಲ್ಲ ಕೆಟ್ಟ ಕಾಲ ಶುರುವಾಯ್ತು. ಕಾಡಿನಲ್ಲಿ ತಿನ್ಲಿಕ್ಕೇನೂ ಸಿಗದೆ ದಿಕ್ಕೆಟ್ಟು ನಗರಗಳೊಳಗೆ ಬರ್ತಾವಲ್ಲ ಕಾಡು ಪ್ರಾಣಿಗಳು; ಥೇಟ್ ಅಂಥದೇ ಪರಿಸ್ಥಿತಿ ಬಂದೈತೆ ನೋಡಿ ಈ ಕಾಡುಮನುಷರಿಗೂ. ಫಾರೆಸ್ಟ್‌ನವರ ಕಿರಿಕಿರಿಗೆ ಕಾಡುಬಿಟ್ಟು ಬೆಂಗಳೂರಿಗೆ ಬಂದ್ರು. ಇಲ್ಲಿಗೆ ಬಂದು ಸಾಧಾರಣ ಹದಿನೈದು ವರ್ಷ ಆಗಿರಬೇಕು. ಆದ್ರೂ ಸೈತ ಈಗಲೂ ಹೊಟ್ಟೆಗೆ ಕೂಳು ಸಿಗದೆ ಹಿಂಗೆಲ್ಲ ಪರದಾಡ್ತಾವೆ ಈ ಕಾಡುಜನ. ಅಯ್ಯೋ ಅನಿಸ್ತದೆ. ಯಾವಾಗ ಸುಧಾರಿಸ್ತಾವೋ?'

'ಇಲ್ಲಿ ಕೂಲಿ ಮಾಡ್ಕೊಂಡು ಬದುಕಬೇಕಿತ್ತು. ಹಿಂಗೆಲ್ಲ ಕಳ್ಳತನ ಮಾಡೋದು ತಪ್ಪಲ್ವಾ?' ರಾಮೇಗೌಡ್ರು ತಮ್ಮ ಆಳದ ಕ್ರೌರ್ಯ ಮುಚ್ಚಿಕೊಳ್ಳಲೆಂಬಂತೆ ಅಸಹನೆ ವ್ಯಕ್ತಪಡಿಸಿದರು.

'ನೀವು ಕೇಳೋದು ಕರೆಕ್ಟು ಸಾಹೇಬ್ರೆ. ಈ ನಗರಗಳಲ್ಲಿ ನಾಗರಿಕರೇ ತುಂಬಿರ್ತಾರೆ. ಮನುಷ್ಯ ನಾಗರಿಕನಾಗೋದು ಅಂದ್ರೆ ಚಲೋತಂಗ ಮಾತಾಡಕ್ಕೆ ಕಲಿಯೋದಷ್ಟೇನಾ ಸಾಹೇಬ್ರಾ? ಮುಖವಾಡ ತೊಟ್ಕೊಂಡು ನಯ ನಾಜೂಕಿನ ಸುಳ್ಳುಗಳನ್ನು ಹೇಳ್ಕೊಂಡು, ಹಿಹ್ಹಿಹ್ಹಿ ಅಂತ ಹಲ್ಲು ಕಿಸ್ಕೊಂಡು ವ್ಯಾಪಾರ ವ್ಯವಹಾರ ಮಾಡೋದಷ್ಟೇನಾ ಸಾಹೇಬ್ರಾ? ಬಣ್ಣದ ಮಾತು ಮಾತಾಡೋ ಮನಶ ಮಾತ್ರ ಇಂಥ ನಗರಗಳಲ್ಲಿ ಬದುಕಾಕ ಆಗೋದು ಸಾಹೇಬ್ರೆ. ಮಾತು ಬರದ ಯಾವ ಪ್ರಾಣಿನಾದ್ರು ಬದುಕ್ತಿದೆಯಾ ನೋಡೇಳಿ ಇಲ್ಲಿ? ಬೀದಿನಾಯಿ ಕಂಡ್ರೂ ಅದನ್ನು ಹಚಾ ಅಂತ ಓಡಿಸ್ತಾರೆ ನಮ್ಮೀ ನಗರದ ಜನ. ಹಿಂಗಾಗಿನೇ ಅಗೋ ಅಲ್ಲಿ, ಇಲ್ಲಿ, ಎಲ್ಲಿ ನೋಡಿದ್ರೂ ಗಿಜಿಗಿಜಿ ಜನವೋ ಜನ. ನಾಗರಿಕ ಜನ. ನಾನು ಗೋಡೆ ಮೇಲೆ ಬಟ್ಟಿಟ್ಟು ಹೇಳ್ತಿನಿ ಸಾಹೇಬ್ರ. ಹಿಂಗ ಮುಂದುವರೆದ್ರ ಮುಂದೊಂದು ದಿನ ಈ ನಗರಗಳ ಜನ, ತಮ್ಮ ತದ್ರೂಪಿ ಮನುಷ್ಯರನ್ನೇ ತಿಂದು ತೇಗುವ ಕಾಲ ಬರುತ್ತೆ ನೋಡಿ. ಈಗಾಗಲೇ ಬಂದಿದೆ. ನಮಗೆ ನಿಮಗೆ ಅರ್ಥ ಆಗ್ತಿಲ್ಲ ಅಷ್ಟೆ'.

ಆತ ಆಕ್ರೋಶಭರಿತನಾಗಿ ಹೇಳುತ್ತಲೇ ಇದ್ದ. ನಾನು ಪ್ರೊಫೆಸರ್ ಮುಖ ನೋಡಿದೆ. ಅವರು ಇದ್ಯಾವುದನ್ನೂ ಗಮನಿಸದೆ ತಮ್ಮ ಮೊಬೈಲಿನಲ್ಲಿ ನಾಳೆ ತಾವು ಮಂಡಿಸಬೇಕಿದ್ದ ಪ್ರಬಂಧದ ಟಿಪ್ಪಣಿ ನೋಡ್ತಾ ಕೂತಿದ್ರು. ಅಥವಾ ಹಾಗೆ ನಾಟಕ ಮಾಡ್ತಾ ಇದ್ರೋ? ಆದ್ರೆ ಮಾತ್ರ ಮುಖ ಮಾತ್ರ ಬಿಳಿಚಿಕೊಂಡಂಗ ಕಾಣ್ತಿತ್ತು. ಅಥವಾ ಅದು ನನ್ನ ಭ್ರಮೆಯೋ?

ನಾನು ಅವರ ಮುಖವನ್ನೇ ನೋಡತೊಡಗಿದೆ. ಅವರ ಮುಖದ ಮೇಲಿನ ಮೀಸೆ ನಿಧಾನಕ್ಕೆ ಅವರ ಮುಖ, ಎದೆ, ಡೊಳ್ಳು ಹೊಟ್ಟೆ, ಎಲ್ಲೆಂದರಲ್ಲಿ ಚಾಚಿಕೊಳ್ಳತೊಡಗಿತು. ಅಷ್ಟಲ್ಲದೇ, ಪಕ್ಕದ ಮೆಜೆಸ್ಟಿಕ್ಕು, ರೋಡು, ಟ್ರೇನು, ಮೆಟ್ರೊ, ಮಹಲು, ಹೋಟ್ಲು, ಲಾಡ್ಜು ಹೀಗೆ ಎಲ್ಲೆಡೆಯೂ ರಾಮೇಗೌಡರ ಮೀಸೆಯೇ ಆವರಿಸತೊಡಗಿತು. ಇಡೀ ಬೆಂಗಳೂರೆಂಬ ಬೆಂಗಳೂರು ಮೀಸೆಹೊತ್ತ ಅಕರಾಳ ವಿಕರಾಳ ಬೃಹತ್ತಾದ ಕ್ರೂರ ಪ್ರಾಣಿಯಂತೆ ಗೋಚರಿಸತೊಡಗಿತು. ಅದರ ಕಬಂಧ ಬಾಹುಗಳಲ್ಲಿ ಇಷ್ಟುದ್ದದ ಚರ್ಮದ ಚಾಟಿಯಿತ್ತು. ಸಿಕ್ಕಸಿಕ್ಕವರ ಮೇಲೆ ವಿನಾಕಾರಣ ಆ ಚಾಟಿಯನ್ನು ಬೀಸುತ್ತಾ ವಿಕಾರವಾಗಿ ಅರಚತೊಡಗಿತ್ತು.